**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಕ್ರಿಮಿನಲ್ ಮೊಕದ್ದಮೆ ನಂ. 27/2018.**

**ಚಾಸಾ-01**

**ಪ್ರಾಸಾ- 01**

**ಸಾಕ್ಷಿಗೆ ದಿನಾಂಕ 05-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು ಃ ಅರುಣ ತಂಃ ಪ್ರಕಾಶ ಜಾಧವ

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಸಿ.ಹೆಚ್ ವಕೀಲರಿಂದ**

1. ಆ ದಿನ ನನಗೆ ನನ್ನ ಮೇಲಾಧಿಕಾರಿಗಳು ಮಾಹಿತಿ ತಿಳಿಸಿದಾಗ ಅಂದಾಜು ಸಂಜೆ 06-30 ರ ಸಮಯ ಮತ್ತು ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ಮಾಹಿತಿ ಬಂದ ತಕ್ಷಣ ನಾನು ಮತ್ತು ಚಾಸಾ-5 ರವರು ನನ್ನ ದ್ವಿ ಚಕ್ರ ವಾಹನದ ಮೂಲಕ ಮತ್ತು ಚಾಸಾ-4 ರವರು ಅವರ ದ್ವಿಚಕ್ರವಾಹನದ ಮೂಲಕ ಸ್ಥಳಕ್ಕೆ ಹೋಗಿರುತ್ತೇವೆ. ಘಟನೆ ಆಗಿದೆ ಎನ್ನಲಾದ ಸ್ಥಳ ನನ್ನ ಮನೆಯಿಂದ ಸುಮಾರು 4 ಕಿ.ಮೀ ಅಂತರದಲ್ಲಿದೆ. ನಾವು ಸ್ಥಳಕ್ಕೆ ಹೋದಾಗ ಸಂಜೆ 06-45 ರ ಸಮಯ ಆಗಿತ್ತು. ಆಗ ಆರೋಪಿ ಮನೆಯಲ್ಲಿಯೇ ಇದ್ದನು.
2. ಆರೋಪಿಯ ಮನೆಯ ಅಕ್ಕ-ಪಕ್ಕದಲ್ಲಿ ಯಾವುದೇ ಮನೆಗಳು ಇರುವುದಿಲ್ಲ. ಅಂದಾಜು ಅರ್ಧ ಕಿ.ಮೀ ಅಂತರದಲ್ಲಿ ಮನೆಗಳು ಇರುತ್ತವೆ. ಎಷ್ಟು ಮನೆಗಳು ಇವೆ ಎಂಬ ಪ್ರಶ್ನೆಯನ್ನು ಅಸಂಬಂಧಿತ ಪ್ರಶ್ನೆ ಎಂದು ತಿರಸ್ಕರಿಸಲಾಯಿತು.
3. ಮನೆಗೆ ತಾಗಿಯೇ ಕೊಟ್ಟಿಗೆ ಇರುತ್ತದೆ. ಸದರಿ ಕೊಟ್ಟಿಗೆ ಯಾವ ದಿಕ್ಕಿನಲ್ಲಿದೆ ಎಂದು ಗೊತ್ತಿಲ್ಲ ಕೊಟ್ಟಿಗೆಯ ಯಾವ ಭಾಗದಲ್ಲಿ ಮು.ಮಾಲುಗಳು ಸಿಕ್ಕಿವು ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೇವು ಹಾಕುವ ಜಾಗದಲ್ಲಿ ಸಿಕ್ಕಿರುತ್ತದೆ, ಆದರೆ ದಿಕ್ಕು ನನಗೆ ನೆನಪಿಲ್ಲ. ಸಾಗುವಾನಿಯ ಒಂದು ಕಟ್ಟಿಗೆ ಬೇರೆ ಜಾಗದಲ್ಲಿ ಮತ್ತು ಸಿಸಂನ 4 ಹಲಗೆಗಳು ಒಂದು ಕಡೆ ಇದ್ದವು. ಸದರಿ ಕಟ್ಟಿಗೆಗಳು 8 ರಿಂದ 10 ಮೀಟರ ಅಂತರದಲ್ಲಿದ್ದವು.

   ಪ್ರಶ್ನೆಃ ಆ ದಿನ ಅಷ್ಟೇ ಮು.ಮಾ ಗಳು ಸಿಕ್ಕವಾ? ಅಥವಾ ಬೇರೆ ಏನಾದರ ಸಿಕ್ಕಿತಾ?

   ಉತ್ತರಃ ದನದ ಕೊಟ್ಟಿಗೆಯಲ್ಲಿ ಒಂದು ಸಾಗುವಾನಿ ಚೌಕ ಮತ್ತು 4 ಸಿಸಂ ನ ಹಲಗೆಗಳು ಸಿಕ್ಕವು ಮತ್ತು ಇನ್ನೊಂದು ಕೋಣೆಯಲ್ಲಿ ಮತ್ತೊಂದು ಸಾಗುವಾನಿ ಚೌಕ ಮತ್ತು ಕತ್ತರಿಸಲು

ಬಳಸುವ ಅಡ್ಡ ಗರಗಸ, ಒಂದು ಬಾಚಿ ಸಿಕ್ಕವು.

ಪ್ರಶ್ನೆಃ ಅಡ್ಡ ಗರಗಸ ಎಷ್ಟು ಉದ್ದ-ಅಗಲ ಇತ್ತು?

ಉತ್ತರಃ 5 ಅಡಿ ಉದ್ದ ಇತ್ತು.

ಪ್ರಶ್ನೆಃ ಅಡ್ಡ ಗರಗಸಕ್ಕೆ ಎಷ್ಟು ಹಿಡಿಕೆಗಳು ಇದ್ದವು?

ಉತ್ತರಃ 2

ಪ್ರಶ್ನೆಃ ಸದರಿ ಹಿಡಿಕೆಗಳು ಎಷ್ಟು ಅಳತೆ ಇದ್ದವು?

ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ಅಲ್ಲಿ ಇದ್ದ ಬಾಚಿಗೆ ಹಿಡಿಕೆ ಇತ್ತಾ?

ಉತ್ತರಃ ಹಿಡಿಕೆ ಇತ್ತು.

ಪ್ರಃ ಸದರಿ ಬಾಚಿಯ ಅಳತೆ ಎಷ್ಟು?

ಉಃ ನನಗೆ ನೆನಪಿಲ್ಲ.

ಪ್ರಃ ಸದರಿ ಬಾಚಿ ಕೋಣೆಯ ಯಾವ ಮೂಲೆಯಲ್ಲಿತ್ತು?

ಉಃ ನನಗೆ ನೆನಪಿಲ್ಲ.

ಪ್ರಃ ಕೊಟ್ಟಿಗೆಯಲ್ಲಿ ಸಿಕ್ಕ ಸಾಗುವಾನಿ ನಗ ಇನ್ನೊಂದು ಕೋಣೆಯಲ್ಲಿ ಸಿಕ್ಕ ಸಾಗುವಾನಿ ನಗಕ್ಕೆ ಎಷ್ಟು ಅಂತರ?

ಉಃ ನನಗೆ ನೆನಪಿಲ್ಲ.

ಪ್ರಃ ಎಲ್ಲಾ ಸಿಕ್ಕ ವಸ್ತುಗಳನ್ನು ಒಂದೇ ಕಡೆ ತೆಗೆದುಕೊಂಡು ಪಂಚನಾಮೆ ಮಾಡಿದಿರಾ? ಅಥವಾ ಬೇರೆ-ಬೇರೆ ಕಡೆ ಪಂಚನಾಮೆ ಮಾಡಿದ್ದಿರಾ?

ಉಃ ಒಂದೇ ಕಡೆ ಅಂದರೆ ಮನೆಯ ಅಂಗಳದಲ್ಲಿ ಪಂಚನಾಮೆ ಮಾಡಿರುತ್ತೇವೆ.

ಪ್ರಃ ಪಂಚರನ್ನು ಯಾರು ಕರೆದುಕೊಂಡು ಬಂದಿದ್ದರು?

ಉಃ ನನಗೆ ನೆನಪಿಲ್ಲ

ಪ್ರಃ ಪಂಚರು ಯಾರು ಇದ್ದರು?

ಉಃ ನನಗೆ ನೆನಪಿಲ್ಲ.

ಪ್ರಃ ಪಂಚರನ್ನು ಎಷ್ಟು ಗಂಟೆಗೆ ಕರೆದುಕೊಂಡು ಬಂದಿರಿ?

ಉಃ ಸಂಜೆ 06-30 ಕ್ಕೆ

4. ಪಂಚನಾಮೆಯನ್ನು ಪಂಚರು ಹೇಳಿದಂತೆ ನಾನೇ ಬರೆದಿರುತ್ತೇನೆ. ಪಂಚರಿಗೆ ಓದಲು ಬರೆಯಲು ಬರುತ್ತಿದೆಯಾ? ಎಂಬ ಪ್ರಶ್ನೆಗೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಸಂಜೆ 07-00 ರಿಂದ 07-30 ರ ವರೆಗೆ ಬರೆದಿರುತ್ತೇನೆ.

5. ನಂತರ ಸ್ಥಳದಲ್ಲಿ ಸಿಕ್ಕ ಮು.ಮಾಗಳನ್ನು ವಲಯ ಅರಣ್ಯ ಕಚೇರಿಗೆ ನಾವೇ ತೆಗೆದುಕೊಂಡು ಹೋಗಿರುತ್ತೇವೆ. ಎಷ್ಟು ಗಂಟೆಗೆ ಮತ್ತು ಹೇಗೆ ಎಂದು ನನಗೆ ನೆನಪಿಲ್ಲ.

**ಬೆಳಗಿನ ಅವಧಿ ಮುಗಿದ ಕಾರಣ, ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು.**

**ಸಾಕ್ಷಿಗೆ ದಿನಾಂಕ 05-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

6. ಸಿಕ್ಕ ಸಿಸಂನ ಹಲಗೆಗಳು ಒಂದೇ ಅಳತೆಯಗಳಾಗಿದ್ದವು.

ಪ್ರಃ ಸದಗಿ ಸಿಸಂನ ಹಲಗೆಗಳ ಅಳತೆ ಎಷ್ಟು?

ಉಃ ನನಗೆ ನೆನಪಿಲ್ಲ.

ಪ್ರಃ ಸದಗಿ ಸಿಸಂನ ಹಲಗೆಗಳನ್ನು ಯಾವುದರಿಂದ ಕತ್ತರಿಸಲಾಗಿತ್ತು?

ಉಃ ಗರಗಸದಿಂದ ಕತ್ತರಿಸಲಾಗಿತ್ತು

ಪ್ರಃ ಅದೇ ರೀತಿ ಸಾಗುವಾನಿ ನಗಗಳನ್ನು ಯಾವುರಿಂದ ಕತ್ತರಿಸಲಾಗಿತ್ತು?

ಉಃ ಗರಗಸದಿಂದ ಕತ್ತರಿಸಲಾಗಿತ್ತು.

ಪ್ರಃ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದೀರಾ?

ಉಃ ತೆಗೆದಿರುತ್ತೇವೆ.

ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಯಿತು.

ಪ್ರಃ ನಿಪಿ-2 ರಲ್ಲಿ ಕಾಣುತ್ತಿರುವ ವಸ್ತುಗಳೇ ಮುದ್ದೆ ಮಾಲುಗಳಾ?

ಉಃ ಹೌದು

ಪ್ರಃ ಸದರಿ ಫೋಟೋವನ್ನು ಯಾರು, ಎದರಲ್ಲಿ ತೆಗೆದಿರುತ್ತಾರೆ?

ಉಃ ನನಗೆ ಗೊತ್ತಿಲ್ಲ.

7. ನಿಪಿ-2 ರಲ್ಲಿ ಕಾಣುತ್ತಿರುವ ವಸ್ತುಗಳು ಗರಗಸದಿಂದ ಕತ್ತರಿಸದ ಹಾಗೆ ಕಾಣುತ್ತಿಲ್ಲ ಎಂದರೆ ಸಾಕ್ಷಿದಾರರು ಬಾಚಿಯಿಂದ ಕೆತ್ತಿರುತ್ತಾರೆ ಎಂದು ನುಡಿಯುತ್ತಾರೆ.

8. ನಿಪಿ-2 ರಲ್ಲಿ ಕಾಣುತ್ತಿರುವ ವಸ್ತುಗಳ ಅಂಚುಗಳನ್ನು ಗರಗಸದಿಂದ ಕತ್ತರಿಸಿಲ್ಲ ಎಂದರೆ ಸಾಕ್ಷಿದಾರರು ಅವುಗಳನ್ನು ಕತ್ತರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ

ಕಾಣುತ್ತಿರುವ ವಸ್ತುಗಳ ಅಂಚುಗಳನ್ನು ಗರಗಸದಿಂದ ಕತ್ತರಿಸಿಲ್ಲ ಅವುಗಳನ್ನು ಕೊಡಲಿಯಿಂದ ಕತ್ತರಿಸಲಾಗಿದೆ ಎಂದರೆ ಸರಿಯಲ್ಲ.

9. ಪಂಚರು ಪಂಚನಾಮೆಯ ಕಾಲಕ್ಕೆ ಒಂದೊಂದು ಸಲ ಸಹಿ ಮಾಡಿರುತ್ತಾರೆ. ನಾನು ಈಗ ಮು.ಮಾ. ಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ ಎಂದರೆ ಸರಿಯಲ್ಲ.

ಪ್ರಃ ನೀವು ಅದಿಕಾರಿಗಳು ಮತ್ತು ಪಂಚರ ಮರಳಿ ಹೋಗಬೇಕಾದರೆ ಒಟ್ಟಿಗೆ ಹೋದಿರಾ ಅಥವಾ ಬೇರೆ ಬೇರೆ ಹೋದಿರಾ?

ಉಃ ಒಟ್ಟಿಗೆ ಬೈಕ್ ನಲ್ಲಿ ಹೋಗಿರುತ್ತೇವೆ.

ಪ್ರಃ ಎಲ್ಲರೂ ವಲಯ ಕಚೇರಿಗೆ ಹೋದರಾ?

ಉಃ ಹೌದು

ಪ್ರಃ ಕಚೇರಿಗೆ ಹೋದಾಗ ಎಷ್ಟು ಗಂಟೆ ಆಗಿತ್ತು?

ಉಃ ನನಗೆ ನೆನಪಿಲ್ಲ.

ಪ್ರಃ ಆ ದಿನ ಎಲ್ಲಾ ಮುದ್ದೆ ಮಾಲುಗಳನ್ನು ಹೇಗೆ ತೆಗೆದುಕೊಂಡು ಹೋದಿರಿ?

ಉಃ ನಾವು ವಾಹನದ ಮೂಲಕ ತೆಗೆದುಕೊಂಡು ಹೋಗಿರುತ್ತೇವೆ.

ಪ್ರಃ ಎಷ್ಟು ಗಂಟೆಗೆ ತೆಗೆದುಕೊಂಡು ಹೋಗಿರುತ್ತೀರಿ?

ಉಃ ನನಗೆ ನೆನಪಿಲ್ಲ.

ಪ್ರಃ ನೀವು ಘಟನಾ ಸ್ಥಳಕ್ಕೆ ಹೋಗಬೇಕಾದರೆ ಪಂಚರ ಜೊತೆಗೆ ಹೋದಿರಾ?

ಉಃ ಹೌದು

10. ನಾನು ಹೇಳಿದಂತೆ ನಾನು ಮತ್ತು ಚಾಸಾ-4 ಮತ್ತು 5 ರವರು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ನಾವು ಜಪ್ತು ಮಾಡಿದ್ದೇವೆ ಎನ್ನಲಾದ ವಸ್ತುಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಜಪ್ತಾದ ವಸ್ತುಗಳನ್ನು ನಾವು ವಾಹನದ ಮೂಲಕ ವಲಯ ಕಚೇರಿಗೆ ಸಾಗಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಿರಿಯ ಅಧಿಕಾರಿಗಳ ಮಾತಿನಂತೆ ನಾನು ಈ ಪ್ರಕರಣಕ್ಕೆ ಅನೂಕುಲವಾಗುವ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಸಹಿ ಇದೆ/-

(ತೇಜಸ್ವಿನಿ ಸೊಗಲದ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.